

## ನನಗೀಗ ಹದಿಮೂರು

ಬಸ್ಯಾನಿಗೆ ‘ಗಣಿತ’ ಎಂದರೆ ನಿಜಕ್ಕೂ ಕಬ್ಬಿಣದ ಕಡಲೆಯೇ. ಮೃದುಹೃದಯಿ, ಸಮಾಧಾನಿ ಸುಮಾ ಟೀಚರ್ ಆತ್ಮವಿಶ್ವಾಸ ತುಂಬಿ ಹುರಿದುಂಬಿಸುವಲ್ಲಿ ನುರಿತವರು. ಅವರ ಬಳಿ ಟ್ಯೂಷನ್‌ಗೆಂದು ಬಸ್ಯಾ ಬರತೊಡಗಿದ. ಮೊದಲದಿನ ಅವನಿಗೊಂದು ಸರಳಾತಿಸರಳ ಲೆಕ್ಕ ಕೊಟ್ಟು ಬಿಡಿಸೆಂದರು.

ಸ್ವಲ್ಪ ಹೊತ್ತಲ್ಲೇ ಬಸ್ಯಾ, ‘ಟೀಚರ್! ನನಗೆ ಗಣಿತ ಅಂದ್ರೆ ಬಹಳ ಭಯ. ನೀವು ಕೊಟ್ಟ ಲೆಕ್ಕ ಹೇಗೆ ಬಿಡಿಸೋದು ಅಂತ್ಲೇ ತಿಳೀತಿಲ್ಲ...’ ಎಂದ.

‘ಪುಟ್ಟಾ ಇದು ತುಂಬಾ ಸುಲಭ ಕಣೋ, ಭಯಪಡಬೇಡ. ಮನಸ್ಸಿಟ್ಟು ಬಿಡಿಸು. ಅದೆಷ್ಟು ಸುಲಭ ಅಂದ್ರೆ ಹತ್ತು ವರ್ಷದವರೂ ಕೂಡ ಲೀಲಾಜಾಲವಾಗಿ ಮಾಡಬಹುದು...’ ಸುಮಾ ಟೀಚರ್ ಅನುನಯಿಸುತ್ತ ಹೇಳಿದರು.

‘ಅದಕ್ಕೇ ನನ್ನ ಕೈಲಾಗೋಲ್ಲ ಅಂದದ್ದು. ನನಗೀಗ ಹದಿಮೂರು ವರ್ಷ ಟೀಚರ್...’ ಅನ್ನೋದೇ ಬಸ್ಯಾ!

**ಲತಾ ಹೆಗಡೆ, ಹುಬ್ಬಳ್ಳಿ**

## ನಾಚಿಕೆ ಇಲ್ಲದವರು

ಮನೆಗೆ ಬಂದ ಅತಿಥಿಗಳು ಊರಿಗೆ ವಾಪಾಸ್ಸಾಗದೆ ತನ್ನ ಮನೆಯಲ್ಲಿಯೇ ಬಿಡಾರ ಹೂಡಿದ್ದು ನೋಡಿ ಹೊಟ್ಟೆ ಉರಿದುಕೊಂಡ ರಾಮರಾಯ ದೊಡ್ಡದಾಗಿ ಅರಚಿದ,

‘ದಯವಿಟ್ಟು ನೀವು ಇನ್ನು ಒಂದಷ್ಟು ದಿನಗಳ ಕಾಲ ಇಲ್ಲೇ ಇರಿ. ‘ನಾಚಿಕೆಯೇ ಇಲ್ಲದವರು’ ಅನ್ನೋ ಶೀರ್ಷಿಕೆಯ ಮೇಲೆ ಒಂದು ಸಂಶೋಧನಾ ಪ್ರಬಂಧ ಬರೆಯುತ್ತಿದ್ದೇನೆ. ನೀವಿದ್ದರೆ ನನಗೂ ತುಂಬಾ ಅನುಕೂಲವಾಗುತ್ತೆ.’

**ರಾಮಪ್ರಸಾದ ಬಿ., ಕೊಪ್ಪಳ**





ಚಿತ್ರಗಳು: ಗಣೇಶ್ ಆಚಾರ್ಯ